KAHS510010092022

Presented on : 22-04-2022
Registered on : 22-04-2022
I.A.No.II Decided on : 09-12-2022
Duration: 7 months, 17 days

**O.S./175/2022**

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.

ದಿನಾಂಕಃ 9 ನೇ ಡಿಸೆಂಬರ್ ಮಾಹೆ, 2022 ನೇ ಇಸವಿ

: ಉಪಸ್ಥಿತರು :
ಶ್ರೀ ಪ್ರಸನ್ನ ಕುಮಾರ್ ಸಿ., ಬಿ.ಎ.ಎಲ್. ಎಲ್ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

ಅಸಲು ದಾವಾ ಸಂಖ್ಯೆಃ 175/2022

ಶ್ರೀ ಎಂ.ಎಸ್.ಮೋಹನ್ ಕುಮಾರ್
ಬಿನ್ ಸಣ್ಣ ದೊಡ್ಡಯ್ಯ,
43 ವರ್ಷ,
ಇವರ ಪರವಾಗಿ ಅಣ್ಣನಾದ ....ವಾದಿಗಳು
ಶಿವಕುಮಾರ್ ಬಿನ್ ರಾಜಯ್ಯ ಆದ ಇವರು
ನೆಕ್ಸ್ಟ್ ಫ್ರೆಂಡ್ ಆಗಿ ಪ್ರತಿನಿಧಿಸುತ್ತಾರೆ.
ಮಾಳೇನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

(ವಾದಿಯ ಪರವಾಗಿ ಶ್ರೀ ಬಿ.ಎಸ್.ಜಿ. ಸ್ವಾಮಿ, ವಕೀಲರು ಪ್ರತಿನಿಧಿಸಿರುತ್ತಾರೆ.)

ವಿರುದ್ಧ

ಶ್ರೀಮತಿ ಪುಟ್ಟಮ್ಮ ಕೋಂ ಪುಟ್ಟಸ್ವಾಮಿ,
48 ವರ್ಷ,
ಮಾಳೇನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. .... ಪ್ರತಿವಾದಿ

( ಪ್ರತಿವಾದಿಯ ಪರವಾಗಿ ಶ್ರೀ ಕೆ.ಪಿ.ವಿರೂಪಾಕ್ಷ, ವಕೀಲರು ಪ್ರತಿನಿಧಿಸಿರುತ್ತಾರೆ)

: ಮಧ್ಯಂತರ ಅರ್ಜಿ-2 ಕ್ಕೆ ಪಕ್ಷಕಾರರು :

ಶ್ರೀ ಎಂ.ಎಸ್.ಮೋಹನ್ ಕುಮಾರ್ .....ಅರ್ಜಿದಾರರು/ವಾದಿ

ವಿರುದ್ಧ

ಶ್ರೀಮತಿ ಪುಟ್ಟಮ್ಮ ..ಎದುರುದಾರರು/ಪ್ರತಿವಾದಿ

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಮಧ್ಯಕಾಲೀನ ಅರ್ಜಿ ಸಂಃ 2 ರ ಮೇಲಿನ ಆದೇಶ

ವಾದಿಯು ಪ್ರತಿವಾದಿಯ ವಿರುದ್ಧ ಮಧ್ಯಂತರ ಅರ್ಜಿ ಸಂ-2 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಯರಾಗಲೀ ಅಥವಾ ಅವರ ಕಡೆಯವರಾಗಲೀ ದಾವಾ ಆಸ್ತಿಯಾದ ಬೇಲೂರು ತಾಲ್ಲೂಕು, ಕಸಬಾ ಹೋಬಳಿ, ಮಾಳೇನಹಳ್ಳಿ ಗ್ರಾಮದ ಸರ್ವೆ ನಂ.110/5 ರಲ್ಲಿರುವ ಖುಷ್ಕಿ 22 ಗುಂಟೆ ಜಮೀನಿಗೆ ಯಾವುದೇ ಅಡ್ಡಿ ಆತಂಕ, ತಂಟೆ‌ತಕರಾರು ಉಂಟು ಮಾಡದಂತೆ, ಅತಿಕ್ರಮಿಸಿ ಶಾಶ್ವತ ಕಟ್ಟಡ ಕಟ್ಟದಂತೆ, ಶೆಡ್ ನಿರ್ಮಾಣ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ಈ ದಾವೆಯನ್ನು ವಾದಿ ಎಂ.ಎಸ್.ಮೋಹನ್ ಕುಮಾರ್ ರವರ ಪರವಾಗಿ ಅವರ ನೆಕ್ಸ್ಟ್ ಫ್ರೆಂಡ್ ಆಗಿ ಅವರ ಅಣ್ಣನಾದ ಶಿವಕುಮಾರ್ ರವರು ಪ್ರತಿನಿಧಿಸುತ್ತಾರೆ. ಈ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾಖಲಿಸಿರುತ್ತಾರೆ. ದಾವಾ ಅನುಸೂಚಿ ಸ್ವತ್ತು ವಾದಿಯ ಪಿತ್ರಾರ್ಜಿತವಾದ ಸ್ವತ್ತಾಗಿರುತ್ತದೆ. ಶ್ರೀಮತಿ ದ್ಯಾವಮ್ಮ ಕೋಂ ಸಣ್ಣ ದೊಡ್ಡಯ್ಯ ರವರು ವಾದಿಯ ಅತ್ತೆಯಾಗಿರುತ್ತಾರೆ.

ರಾಜಯ್ಯ ರವರು ವಾದಿಯ ನಿಜ ತಂದೆಯಾಗಿದ್ದು, ದ್ಯಾವಮ್ಮ ರವರು ತಂದೆಯ ಅಕ್ಕನಾಗಿರುತ್ತಾರೆ. ಸದರಿ ದ್ಯಾವಮ್ಮ ರವರಿಗೆ ಯಾವುದೇ ಬೇರೆ ವಾರಸುದಾರರು ಇಲ್ಲದ ಕಾರಣ ತಮ್ಮನ ಮಗನಾದ ವಾದಿಯನ್ನು ಚಿಕ್ಕ ವಯಸ್ಸಿನಲ್ಲಿಯೇ ಸಾಕು ಮಗನಾಗಿ ಸ್ವೀಕಾರ ಮಾಡಿಕೊಂಡು ಬಂದಿರುತ್ತಾರೆ. ಆದಕಾರಣ, ವಾದಿಯ ತಂದೆಯ ಹೆಸರು ಸಣ್ಣದೊಡ್ಡಯ್ಯ ಎಂದು ರೆವಿನ್ಯೂ ಮತ್ತು ಇತರೆ ದಾಖಲೆಗಳಲ್ಲಿ ನಮೂದಾಗಿರುತ್ತದೆ. ದ್ಯಾವಮ್ಮನ ಎಲ್ಲಾ ಸಂಪೂರ್ಣ ಸ್ವತ್ತುಗಳಿಗೆ ವಾದಿಯೇ ಕಾನೂನುಬದ್ಧ ವಾರಸುದಾರನಾಗಿರುತ್ತಾರೆ. ದಾವಾ ಆಸ್ತಿಯು ದ್ಯಾವಮ್ಮ ನವರ ಯಜಮಾನರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತಾಗಿದ್ದು, ಸಣ್ಣದೂಡ್ಡಯ್ಯ ರವರಿಗೂ ಸಹ ಯಾರು ಸಹೋದರ ಸಹೋದರಿಯರು ಇಲ್ಲದೆ ಇರುವುದರಿಂದ ವಾದಿಯೇ ಸಂಪೂರ್ಣ ಹಕ್ಕುದಾರರಾಗಿರುತ್ತಾರೆ. ಸಣ್ಣ ದೊಡ್ಡಯ್ಯ ಮರಣಾ ನಂತರ, ಅವರ ಧರ್ಮ ಪತ್ನಿ ದ್ಯಾವಮ್ಮನ ಹೆಸರಿನಲ್ಲಿ ಖಾತೆ ಮುಂದುವರಿದುಕೊಂಡು ಬಂದಿದ್ದು, ಆಕೆಯ ಮರಣಾ ನಂತರ, ದಾವಾ ಆಸ್ತಿಯು ವಾದಿಯ ಹೆಸರಿನಲ್ಲಿ ಎಂ.ಆರ್.ನಂ. 22/2008-2009 ರಂತೆ ಖಾತೆಯಾಗಿರುತ್ತದೆ. ವಾದಿಯು ಸುಮಾರು 10 ವರ್ಷಗಳಿಂದ ಮಾನಸಿಕ ಅಸ್ವಸ್ಥನಾಗಿದ್ದು, ಆತನಿಗೆ ಹೆಂಡತಿ, ಮಕ್ಕಳಿದ್ದು, ಮಕ್ಕಳು ಮೈನರ್ ಆಗಿದ್ದು, ವಾದಿಯ ಹೆಂಡತಿ ಸದರಿ ಪ್ರಕರಣವನ್ನು ನಡೆಸುವ ಸಾಮರ್ಥ್ಯ ಇರುವುದಿಲ್ಲ. ಆದಕಾರಣ ವಾದಿಯನ್ನು ಆತನ ಅಣ್ಣ ಪ್ರತಿನಿಧಿಸುತ್ತಾರೆ. ವಾದಿಯು ಪ್ರಸ್ತುತ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಸ್ಥತೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಮತ್ತು ಎಲ್ಲಾ ಚಿಕಿತ್ಸೆಯನ್ನು ವಾದಿಯ ಅಣ್ಣ ನೋಡಿಕೊಳ್ಳುತ್ತಿರುತ್ತಾರೆ. ದಾವಾ ಆಸ್ತಿಯು ವಾದಿಯ ಹೆಸರಿಗೆ ಖಾತೆಯಾಗಿದ್ದು, ಪ್ರಸ್ತುತ ದಾವಾ ಆಸ್ತಿಯಲ್ಲಿ ರಾಗಿ, ಜೋಳ, ಅಲೂಗೆಡ್ಡೆ ಮತ್ತು ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಹಾಗೂ ಹೇರಳವಾಗಿ ಹಣ ಖರ್ಚು ಮಾಡಿ ದಾವಾ ಆಸ್ತಿಯನ್ನು ಫಲವತ್ತು ಮಾಡಿ ಸ್ವಾಧೀನಾನುಭವದಲ್ಲಿರುತ್ತಾರೆ.

3. ವಾದಿಯು ಮುಂದುವರೆದು ಹೇಳುವುದೇನೆಂದರೆ, ಪ್ರತಿವಾದಿಯು ತಾನು ಸ್ವಾಧೀನದಲ್ಲಿರುವ ಪೂರ್ವ - ಪಶ್ಚಿಮ 23 ಅಡಿಗಳಿಗೆ ಬದಲಾಗಿ ದಾವಾ ಅನುಸೂಚಿ ಸ್ವತ್ತನ್ನು ಒತ್ತುವರಿ ಮಾಡಿ 10 ಅಡಿ ಸೇರಿಸಿಕೊಂಡು ಮನೆಯನ್ನು ಕಟ್ಟಲು ಪ್ರಯತ್ನಿಸುತ್ತಿರುತ್ತಾರೆ. ಆದರೆ ಪ್ರತಿವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ

ಹಕ್ಕಾಗಲೀ, ಸ್ವಾಧೀನವಾಗಲೀ ಇರುವುದಿಲ್ಲ. ದಾವಾ ಅನುಸೂಚಿ ಆಸ್ತಿ ತನಗೆ ಸೇರಬೇಕೆಂದು ಹೇಳಿಕೊಂಡು ಪ್ರತಿವಾದಿಯು ಸ್ಥಳದಲ್ಲಿ ಗಲಾಟೆ ಮಾಡಿ ತೊಂದರೆ ನೀಡಿ ಒಕ್ಕಲು ಎಬ್ಬಿಸಲು ಪ್ರಯತ್ನಿಸಿರುತ್ತಾರೆ. ವಾದಿಯ ದಾವಾ ಅನುಸೂಚಿ ಸ್ವತ್ತಿನಲ್ಲಿ ಅಕ್ರಮವಾಗಿ ತಳಪಾಯವನ್ನು ತೆಗೆದು ಮನೆಯನ್ನು ಕಟ್ಟಲು ಪ್ರಯತ್ನಿಸುತ್ತಿರುತ್ತಾರೆ. ಆದಕಾರಣ ಪ್ರತಿವಾದಿಯು ವಾದಿಯ ಅನುಸೂಚಿ ಸ್ವತ್ತಿನ ಸ್ವಾಧೀನಾನುಭವಕ್ಕೆ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿ ಅಡ್ಡಿ ಆತಂಕ ಉಂಟು ಮಾಡುತ್ತಿರುತ್ತಾರೆ. ಪ್ರತಿವಾದಿಯು ಊರಿನಲ್ಲಿ ಹಣಬಲ, ಜನಬಲ ಹಾಗೂ ರಾಜಕೀಯ ಬಲವುಳ್ಳ ಬಲಿಷ್ಟ ವ್ಯಕ್ತಿಯಾಗಿದ್ದು ವಾದಿಯ ದಾವಾ ಆಸ್ತಿಗೆ ಯಾವ ಸಮಯದಲ್ಲಾದರೂ ತೊಂದರೆ ಉಂಟು ಮಾಡುವ ಸಂಭವ ಹೆಚ್ಚಾಗಿದ್ದು, ಊರಿನ ಹಿರಿಯರು ಮತ್ತು ಹಿತೈಷಿಗಳಿಂದ ಹೇಳಿದರೂ ಪಂಚಾಯ್ತಿ ಮಾಡಿ ಬುದ್ದಿವಾದ ಹೇಳಿದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದಕಾರಣ ವಾದಿಯು ಈ ದಾವೆಯನ್ನು ಮತ್ತು ಮಧ್ಯಂತರ ಅರ್ಜಿ-2 ನ್ನು ಸಲ್ಲಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

4. ದಾವಾ ಸಲ್ಲಿಸಿದ ಬಳಿಕ ನ್ಯಾಯಾಲಯ ಹೊರಡಿಸಿದ ಸಮನ್ಸ್ ಗೆ ಪ್ರತಿಯಾಗಿ ಪ್ರತಿವಾದಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ವಾದ ಪತ್ರಕ್ಕೆ ವಿರುದ್ಧವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಸದರಿ ಲಿಖಿತ ಹೇಳಿಕೆಯನ್ನೇ ಮಧ್ಯಂತರ ಅರ್ಜಿ-2 ಕ್ಕೆ ತಕರಾರೆಂದು ಪರಿಗಣಿಸಬೇಕಾಗಿ ಮೆಮೋ ಸಲ್ಲಿಸಿ ಕೋರಿರುತ್ತಾರೆ. ಪ್ರತಿವಾದಿಯು ವಾದಿಯ ದಾವೆಯಲ್ಲಿ ಮತ್ತು ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ಸುಳ್ಳೆಂದು ನಿರಾಕರಿಸಿರುತ್ತಾರೆ. ಪ್ರತಿವಾದಿಯು ತನ್ನ ತಕರಾರಿನಲ್ಲಿ ಹೇಳುವುದೇನೆಂದರೆ ತನ್ನ ಮಾವ ಅಂದರೆ ತನ್ನ ಗಂಡನ ತಂದೆಯಾದ ದ್ಯಾವಯ್ಯ ಬಿನ್ ದೊಡ್ಡವೀರಯ್ಯ ರವರು ಹನಿಕೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮಾಳೇನಹಳ್ಳಿ ಗ್ರಾಮಕ್ಕೆ ಸೇರಿದ ಪಂಚಾಯ್ತಿ ಖಾತೆ ಸಂಖ್ಯೆ 77 ಹಾಗೂ ಸ್ವತ್ತಿನ ಸಂಖ್ಯೆ 151600403100300007 ರಲ್ಲಿ ದಾವಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತಾದ ಪೂರ್ವ – ಪಶ್ಚಿಮ 6.4008 ಮೀಟರ್, ಉತ್ತರ – ದಕ್ಷಿಣ 5.7912 ಮೀಟರ್ ವುಳ್ಳ ನಿವೇಶನವನ್ನು ದಾನ ಪತ್ರದ ಮೂಲಕ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದು, ಸದರಿ ದಾನ ಪತ್ರದ ಆಧಾರದ ಮೇಲೆ

ಪ್ರತಿವಾದಿಯು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಸ್ವತ್ತಿನ ಹಕ್ಕುದಾರರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ನಂತರ ಪ್ರತಿವಾದಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾದ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಇವರಿಂದ ಮನೆಯನ್ನು ಮಂಜೂರು ಮಾಡಿಸಿಕೊಂಡು ಮನೆಯನ್ನು ಕಟ್ಟುತ್ತಿರುತ್ತಾರೆ. ಹೀಗಿರುವಾಗ, ವಾದಿಯು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರತಿವಾದಿಗೆ ಸೇರಿದ ನಿವೇಶನದ ಪಶ್ಚಿಮ ದಿಕ್ಕಿನಲ್ಲಿ ವಾದಿಯು ಇರುವುದನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದಾವೆಯನ್ನು ತಂದಿರುತ್ತಾರೆ.

5. ಪ್ರತಿವಾದಿಯು ಮುಂದುವರೆದು ಹೇಳುವುದೇನೆಂದರೆ, ವಾದಿಯ ದಾವಾ ಆಸ್ತಿಯು ಸರ್ವೆ ನಂಬರ್ ಜಾಗವಾಗಿದ್ದು, ಪ್ರತಿವಾದಿಗೆ ಸೇರಿದ ಆಸ್ತಿಯು ಹನಿಕೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಆಸ್ತಿಯಾಗಿರುತ್ತದೆ, ಆದ್ದರಿಂದ ಗಾಮ ಠಾಣಾದ ಆಸ್ತಿಗೂ, ಸರ್ವೆ ನಂಬರ್ ಆಸ್ತಿಗೂ ವ್ಯತ್ಯಾಸವಿರುತ್ತದೆ. ಪ್ರತಿವಾದಿಗೆ ವಾಸ ಮಾಡಲು ಮನೆ ಇಲ್ಲದೆ ಬೇರೆಯವರ ಮನೆಯಲ್ಲಿ ವಾಸಿಸುತ್ತಿದ್ದು, ದಾವಾ ಅನುಸೂಚಿ ಸ್ವತ್ತಿಗೂ ಪ್ರತಿವಾದಿಯ ನಿವೇಶನಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳುತ್ತಾ ವಾದಿಯು ಪ್ರತಿವಾದಿಯ ವಿರುದ್ಧ ತಂದಿರುವ ಸದರಿ ದಾವೆಯನ್ನು ಹಾಗೂ ಅದರೊಂದಿಗೆ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

6. ವಾದಿಯು ಸಲ್ಲಿಸಿರುವ ಅರ್ಜಿ ಹಾಗೂ ಪ್ರತಿವಾದಿಯು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಆಧರಿಸಿ ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ಈ ನ್ಯಾಯಾಲಯವು ರೂಪಿಸಿರುತ್ತದೆ.

1. ವಾದಿಯ ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಅತಿಕ್ರಮಿಸಿ ಮನೆಯನ್ನು ಕಟ್ಟಲು ಮುಂದಾಗಿರುವುದಾಗಿ ಮೇಲ್ನೋಟಕ್ಕೆ ತೋರಿಸುತ್ತಾರೆಯೇ?

2. ವಾದಿಯು ಅರ್ಜಿಯಲ್ಲಿ ಕೋರಿರುವಂತೆ ತಮ್ಮ ಪರವಾಗಿ ಅನುಕೂಲತೆಯ ಒಲವು ಇದೆ ಎಂಬುದನ್ನು ತೋರಿಸುತ್ತಾರೆಯೇ?

3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದಿದ್ದರೆ ತುಂಬಲಾರದ ಹಾನಿ ಅಥವಾ ನಷ್ಟ ಉಂಟಾಗುವ ಸಂಭವವಿದೆ ಎಂಬುದನ್ನು ತೋರಿಸುತ್ತಾರೆಯೇ?

4. ಯಾವ ಆದೇಶ?

7. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

8. ವಾದಿ/ ಅರ್ಜಿದಾರರು ಸಲ್ಲಿರುವ ಅರ್ಜಿ, ಪ್ರತಿವಾದಿಯು ಲಿಖಿತ ಹೇಳಿಕೆಯನ್ನೇ ಮಧ್ಯಂತರ ಅರ್ಜಿ-2 ಕ್ಕೆ ತಕರಾರೆಂದು ಸಲ್ಲಿಸಿರುವ ಆಕ್ಷೇಪಣೆ ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಗಣಿಸಿ ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶಃ1 ಸಕಾರಾತ್ಮಕವಾಗಿ

ಅಂಶಃ2 ಸಕಾರಾತ್ಮಕವಾಗಿ

ಅಂಶಃ3 ಸಕಾರಾತ್ಮಕವಾಗಿ

ಅಂಶಃ4 ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

## : ಕಾರಣಗಳು :

9. ಅಂಶಗಳುಃ 1 ರಿಂದ 3 : ಈ ಮೂರೂ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆ.

10. ವಾದಿಯ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ಅನುಸೂಚಿ ಸ್ವತ್ತಿಗೆ ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರಾಗಲೀ ಸ್ವಾಧೀನಾನುಭವಕ್ಕೆ ಅಡ್ಡಿ -ಆತಂಕ ತಂಟೆ -ತಕರಾರು ಉಂಟು ಮಾಡದಂತೆ, ಅನುಸೂಚಿ ಸ್ವತ್ತನ್ನು ಅತಿಕ್ರಮಿಸಿ ಶಾಶ್ವತ ಕಟ್ಟಡ ಕಟ್ಟದಂತೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಕೋರಿರುತ್ತಾರೆ.

11. ವಾದಿಯು ಹೇಳುವುದೇನೆಂದರೆ ದಾವಾ ಆಸ್ತಿಯು ವಾದಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತಾಗಿರುತ್ತದೆ. ವಾದಿಗೆ ದ್ಯಾವಮ್ಮ ಕೋಂ ಸಣ್ಣ ದೊಡ್ಡಯ್ಯ ರವರು ಅತ್ತೆಯಾಗಿದ್ದು, ಸದರಿ ದ್ಯಾವಮ್ಮ ಮತ್ತು ಸಣ್ಣದೊಡ್ಡಯ್ಯರವರಿಗೆ ಯಾವುದೇ ವಾರಸುದಾರರು ಇಲ್ಲದ ಕಾರಣ ವಾದಿಯನ್ನು ತಾವು ಸ್ವೀಕಾರ ಮಾಡಿಕೊಂಡು ಚಿಕ್ಕ ವಯಸ್ಸಿನಿಂದಲೇ ಸಾಕುತ್ತಿರುತ್ತಾರೆ. ಆದಕಾರಣ ವಾದಿಯ ತಂದೆ ಹೆಸರು ಪ್ರಸ್ತುತ ರೆವಿನ್ಯೂ ದಾಖಲೆಗಳಲ್ಲಿ ಸಣ್ಣದೊಡ್ಡಯ್ಯ ಎಂದು ನಮೂದಾಗಿರುತ್ತದೆ. ವಾದಿಯು ಈ ಬಗ್ಗೆ ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತಾರೆ ಹಾಗೂ ಪಹಣಿ ಪತ್ರಿಕೆಯಲ್ಲಿ ದಾವಾ ಸರ್ವೆ ನಂ.110/5 ರ 22 ಗುಂಟೆ ಜಮೀನಿಗೆ ವಾದಿಯ ಹೆಸರು ಕಲಂ.9 ರಲ್ಲಿ ದಾಖಲಾಗಿರುತ್ತದೆ. ವಾದಿಯ ಹೆಸರಿಗೆ ಎಂ.ಆರ್. ನಂ.22/2008-2009 ರಂತೆ ದ್ಯಾವಮ್ಮ ಕೋಂ ಸಣ್ಣದೊಡ್ಡಯ್ಯ ರವರಿಂದ ಪೌತಿ ಖಾತೆಯ ಆಧಾರದ ಮೇಲೆ ಹಕ್ಕು ಬದಲಾವಣೆಯಾಗಿರುವುದು ಕಂಡು ಬರುತ್ತದೆ. ವಾದಿಯ ಜಮೀನಿಗೆ ಚೆಕ್ಕುಬಂದಿ ಪ್ರಮಾಣ ಪತ್ರವನ್ನು ಸಹ ಸಲ್ಲಿಸಿರುತ್ತಾರೆ.

12. ವಾದಿಯ ಪರ ವಕೀಲರು ವಾದ ಮಂಡನೆ ಸಮಯದಲ್ಲಿ ಹೇಳುವುದೇನೆಂದರೆ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಗ್ರಾಮ ಠಾಣಾ ಆಸ್ತಿಯಾಗಿದ್ದು, ಸದರಿ ಆಸ್ತಿಯು ಪ್ರತಿವಾದಿಗೆ ಸೇರದೇ ಇದ್ದರೂ ಸಹ ಮೋಸದಿಂದ ತನ್ನ ಹೆಸರಿಗೆ ಮಾಡಿಕೊಂಡು ಪ್ರತಿವಾದಿಗೆ ಪಶ್ಚಿಮ ದಿಕ್ಕಿನಲ್ಲಿ 23 ಅಡಿಗಳು ಇದ್ದರೂ ಸಹ ವಾದಿಯ ಈಗಿನ ಮಾನಸಿಕ ಪರಿಸ್ಥಿತಿಯನ್ನು ಉದ್ದೇಶಪೂರ್ವಕವಾಗಿ ದುರುಪಯೋಗ ಮಾಡಿಕೊಂಡು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ 10 ಅಡಿಯ ಜಾಗವನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಲು ಪ್ರಯತ್ನಿಸುತ್ತಿರುತ್ತಾರೆ.

13. ಅದೇ ರೀತಿ ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆ ಸಮಯದಲ್ಲಿ ಹೇಳುವುದೇನೆಂದರೆ, ವಾದಿಗೆ ಸೇರಿದ ಜಾಗವು ಸರ್ವೆ ನಂಬರ್ ಆಗಿದ್ದು ಪ್ರತಿವಾದಿಗೆ ಸೇರಿದ ಜಾಗವು ಗ್ರಾಮ ಠಾಣಾ ಸ್ವತ್ತಾಗಿದ್ದು, ಎರಡು ಬೇರೆ ಬೇರೆಯಾಗಿರುತ್ತದೆ. ಅಲ್ಲದೇ ವಾದಿಯು ಶ್ರೀಮತಿ ದ್ಯಾವಮ್ಮ ರವರ ಪುತ್ರ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ದ್ಯಾವಮ್ಮ ಮತ್ತು ಸಣ್ಣದೊಡ್ಡಯ್ಯನವರಿಗೆ

ಯಾವುದೇ ವಾರಸುದಾರರು ಇಲ್ಲ ಎಂಬ ಅಂಶಗಳನ್ನು ಮನಗಂಡು ವಾದಿ ಮತ್ತು ಆತನ ಅಣ್ಣ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ತಮ್ಮ ಹೆಸರಿಗೆ ಕಾನೂನು ಬಾಹಿರವಾಗಿ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಈ ಬಗ್ಗೆ ವಾದಿಯು ತಹಶೀಲ್ದಾರ್ ರವರ ಪರವಾಗಿ ದಿನಾಂಕ 11-03-2021 ರಂದು ನೀಡಿದ ಹಿಂಬರಹವನ್ನು ಸಲ್ಲಿಸಿ ಅದರಲ್ಲಿ ಮಾಳೇನಹಳ್ಳಿ ಗ್ರಾಮ ಜೋಡಿ ಗ್ರಾಮ ಆದಕಾರಣ ಆರ್. ಆರ್ 5 ಮತ್ತು 6 ರ ವಹಿಗಳು ಲಭ್ಯ ಇರುವುದಿಲ್ಲವೆಂದು ಸಲ್ಲಿಸಿರುತ್ತಾರೆ. ವಾದಿಯು ಪ್ರತಿವಾದಿಯು ಕಟ್ಟಲು ಪ್ರಯತ್ನಿಸುತ್ತಿದ್ದಾರೆ ಎಂಬ ಜಾಗದ ಫೋಟೋಗಳನ್ನು ಸಹ ಸಲ್ಲಿಸಿರುತ್ತಾರೆ. ಅಲ್ಲದೇ ವಾದಿಯು ಮಾನಸಿಕ ಖಿನ್ನತೆಯಿಂದ ಬಳಲುತ್ತಿರುವುದರಿಂದ ಅನೇಕ ಗ್ರಾಮಸ್ಥರಿಗೆ ದೈಹಿಕವಾಗಿ ಹಲ್ಲೆ ಮಾಡಿರುವ ಬಗ್ಗೆ ನಿಮಾನ್ಸ್ ನಿರ್ದೇಶಕರಿಗೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರು ಬರೆದ ಪತ್ರವನ್ನು ಸಲ್ಲಿಸಿರುತ್ತಾರೆ. ವಾದಿಯು ಬೆಂಗಳೂರಿನ ನಿಮಾನ್ಸ್ ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಒಪಿಡಿ ರಶೀದಿ ಮತ್ತು ಒಪಿಡಿ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

14. ಪ್ರತಿವಾದಿಯು ತನ್ನ ತಕರಾರಿನಲ್ಲಿ ಹೇಳುವುದೇನೆಂದರೆ ತನ್ನ ಮಾವ ಅಂದರೆ ತನ್ನ ಗಂಡನ ತಂದೆಯಾದ ದ್ಯಾವಯ್ಯ ಬಿನ್ ದೊಡ್ಡವೀರಯ್ಯ ರವರು ಹನಿಕೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮಾಳೇನಹಳ್ಳಿ ಗ್ರಾಮಕ್ಕೆ ಸೇರಿದ ಪಂಚಾಯ್ತಿ ಖಾತೆ ಸಂಖ್ಯೆ 77 ಹಾಗೂ ಸ್ವತ್ತಿನ ಸಂಖ್ಯೆ 15160040310030007 ರಲ್ಲಿ ದಾವಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತಾದ ಪೂರ್ವ – ಪಶ್ಚಿಮ 6.4008 ಮೀಟರ್, ಉತ್ತರ – ದಕ್ಷಿಣ 5.7912 ಮೀಟರ್ ವುಳ್ಳ ನಿವೇಶನವನ್ನು ದಾನ ಪತ್ರದ ಮೂಲಕ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದು, ಸದರಿ ದಾನ ಪತ್ರದ ಆಧಾರದ ಮೇಲೆ ಪ್ರತಿವಾದಿಯು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಸ್ವತ್ತಿನ ಹಕ್ಕುದಾರರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ನಂತರ ಪ್ರತಿವಾದಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾದ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಇವರಿಂದ ಮನೆಯನ್ನು ಮಂಜೂರು ಮಾಡಿಸಿಕೊಂಡು ಮನೆಯನ್ನು ಕಟ್ಟುತ್ತಿರುತ್ತಾರೆ. ಹೀಗಿರುವಾಗ ವಾದಿಯು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರತಿವಾದಿಗೆ ಸೇರಿದ ನಿವೇಶನದ ಪಶ್ಚಿಮ ದಿಕ್ಕಿನಲ್ಲಿ ವಾದಿಯು ಇರುವುದನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದಾವೆಯನ್ನು ತಂದಿರುತ್ತಾರೆ.

ವಾದಿಯ ದಾವಾ ಆಸ್ತಿಯು ಸರ್ವೆ ನಂಬರ್ ಜಾಗವಾಗಿದ್ದು, ಪ್ರತಿವಾದಿಗೆ ಸೇರಿದ ಆಸ್ತಿಯು ಹನಿಕೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಆಸ್ತಿಯಾಗಿರುತ್ತದೆ, ಆದ್ದರಿಂದ ಗಾಮ ಠಾಣಾದ ಆಸ್ತಿಗೂ, ಸರ್ವೆ ನಂಬರ್ ಆಸ್ತಿಗೂ ವ್ಯತ್ಯಾಸವಿರುತ್ತದೆ ಹಾಗೂ ದಾವಾ ಅನುಸೂಚಿ ಸ್ವತ್ತಿಗೂ ಪ್ರತಿವಾದಿಯ ನಿವೇಶನಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳುತ್ತಾರೆ.

15. ಪ್ರತಿವಾದಿ ತನ್ನ ಹೆಸರಿಗೆ ಆದ ದಿನಾಂಕ 28-11-2018 ರ ದಾನ ಪತ್ರದ ದಾಖಲೆಗಳನ್ನು ಹಾಜರು ಮಾಡಿರುತ್ತಾರೆ. ಸದರಿ ದಾನ ಪತ್ರದ ಚೆಕ್ಕು ಬಂದಿಯಲ್ಲಿ ಪಶ್ಚಿಮ ದಿಕ್ಕಿಗೆ ಸರ್ವೆ ನಂಬರ್ ಜಾಗ ಇರುವುದು ಕಂಡುಬರುತ್ತದೆ. ಸದರಿ ಸರ್ವೆ ನಂಬರ್ ಜಾಗ ವಾದಿಗೆ ಸೇರಿದ ಜಾಗ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಏಕೆಂದರೆ ಈ ವಿಚಾರದಲ್ಲಿ ವಾದಿಯು ಸಲ್ಲಿಸಿದ ಚೆಕ್ಕು ಬಂದಿ ಮತ್ತು ಪ್ರತಿವಾದಿಯು ಸಲ್ಲಿಸಿದ ಚೆಕ್ಕು ಬಂದಿ ತಾಳೆಯಾಗುತ್ತದೆ. ಪ್ರತಿವಾದಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಇ- ಸ್ವತ್ತು ಮತ್ತು ಪ್ರಸ್ತುತ ಇಸ್ವತ್ತು ಆದೇಶವನ್ನು ಹಾಜರು ಮಾಡಿರುತ್ತಾರೆ. ಮುಖ್ಯವಾಗಿ ಪ್ರತಿವಾದಿಯು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಅವರ ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ ಪತ್ರ ದಿನಾಂಕಃ 04-07-2022 ನ್ನು ಸಲ್ಲಿಸಿರುತ್ತಾರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯು ಒಂದು ವರ್ಷಗಳ ಒಳಗಾಗಿ ಮನೆಯ ಕಾಮಗಾರಿಯನ್ನು ಸಂಪೂರ್ಣವಾಗಿ ಮುಗಿಸಬೇಕು ಎಂಬ ಷರತ್ತು ಇರುತ್ತದೆ. ಪ್ರತಿವಾದಿಯು ತನ್ನ ಸ್ವಾಧೀನಕ್ಕೆ ಸಂಬಂಧಿಸಿದ ಸ್ವತ್ತಿನ ಕಂದಾಯವನ್ನು ಪಾವತಿ ಮಾಡಿರುವ ಬಗ್ಗೆ ರಶೀದಿಯನ್ನು ಮತ್ತು ತೆರಿಗೆ ಬಾಬ್ತು ಬೇಡಿಕೆ ರಿಜಿಸ್ಟರ್ ನ್ನು ಸಹ ಸಲ್ಲಿಸಿರುತ್ತಾರೆ.

16. ಪ್ರತಿವಾದಿಯು ಸಲ್ಲಿಸಿದ ದಾಖಲೆಗಳ ಪ್ರಕಾರ ತನ್ನ ಆಸ್ತಿ ಸಂಖ್ಯೆ -77 ಪೂರ್ವ -ಪಶ್ಚಿಮ 6.4008 ಮೀಟರ್, ಉತ್ತರ – ದಕ್ಷಿಣ 5.7912 ಮೀಟರ್ ರ ಆಸ್ತಿಯ ಸ್ವಾಧೀನಾನುಭವದಲ್ಲಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದರೆ ಈ ದಾವೆಯಲ್ಲಿ ವಾದಿಯು ಮುಖ್ಯವಾಗಿ ಸಲ್ಲಿಸುವುದು ಏನೆಂದರೆ ಪ್ರತಿವಾದಿಗೆ ಮಂಜೂರಾಗಿರುವ ಜಾಗವನ್ನು ಹೊರತುಪಡಿಸಿ ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ 10

ಅಡಿ ಹೆಚ್ಚುವರಿಯಾಗಿ ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಲು ಪ್ರಯತ್ನಿಸುತ್ತಿರುತ್ತಾರೆ ಎಂಬುದಾಗಿರುತ್ತದೆ. ಈ ಬಗ್ಗೆ ವಾದಿ ಮತ್ತು ಪ್ರತಿವಾದಿಯು ಸಲ್ಲಿಸಿರುವ ಫೋಟೋಗಳನ್ನು ಕೂಲಂಕುಷವಾಗಿ ಪರಿಶೀಲಸಲಾಗಿ, ಪ್ರತಿವಾದಿಯು ಪೂರ್ವ ದಿಕ್ಕಿನಲ್ಲಿ ಹೆಚ್ಚುವರಿಯಾಗಿ ತಳಪಾಯ ನಿರ್ಮಿಸಲು ಪ್ರಯತ್ನಿಸುತ್ತಿರುವ ಬಗ್ಗೆ ಕಂಡು ಬರುತ್ತದೆ. ಆದರೆ ಪ್ರತಿವಾದಿಯು ವಾದಿಯ ದಾವಾ ಆಸ್ತಿಯ ಮೇಲೆ ಹಕ್ಕು ಮತ್ತು ಸ್ವಾಧೀನವನ್ನು ಪ್ರಶ್ನೆ ಮಾಡಿರುತ್ತಾರೆ. ವಾದಿಯು ದ್ಯಾವಮ್ಮ ಮತ್ತು ಸಣ್ಣದೊಡ್ಡಯ್ಯ ರವರ ಕಾನೂನುಬದ್ಧ ದತ್ತು ಮಗನೋ ಅಲ್ಲವೋ ಎಂಬುದು ವಾದ ವಿವಾದ ಮತ್ತು ಸಾಕ್ಷ್ಯ ವಿಚಾರಣೆ ನಂತರ ತಿಳಿಯಬೇಕಾಗಿರುತ್ತದೆ. ಈ ಹಂತದಲ್ಲಿ ವಾದಿಯು ಹಾಜರು ಪಡಿಸಿದ ಪಹಣಿ ಪತ್ರಿಕೆ, ಮ್ಯುಟೇಷನ್ ಮತ್ತು ಫೋಟೋಗಳ ಪ್ರಕಾರ ಮೇಲ್ನೋಟಕ್ಕೆ ವಾದಿಯು ದಾವಾ ಅಸ್ತಿಯ ಸ್ವಾಧೀನಾನುಭವದಲ್ಲಿ ಇರುವುದು ಕಂಡು ಬರುತ್ತದೆ. ದಾವಾ ಆಸ್ತಿಯಲ್ಲಿ ವಾದಿಯನ್ನು ಹೊರತುಪಡಿಸಿ ಬೇರೆ ಯಾರೋ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂಬ ಬಗ್ಗೆ ನಿರ್ಣಯಕ್ಕೆ ಈ ಹಂತದಲ್ಲಿ ಬರಲು ಆಗುವುದಿಲ್ಲ. ಆದರೆ ಪ್ರತಿವಾದಿ ಒತ್ತುವರಿ ಮಾಡಿ ಕಟ್ಟಡ ಕಟ್ಟಲು ಪ್ರಯತ್ನಿಸುತ್ತಿರುವುದು ಈ ಹಂತದಲ್ಲಿ ಕಂಡು ಬರುತ್ತದೆ. ಆದ್ದರಿಂದ ಅನುಕೂಲತೆಯ ಒಲವು ವಾದಿಯ ಕಡೆಗೆ ಇರುತ್ತದೆ. ಆದಕಾರಣ ಪ್ರತಿವಾದಿಗೆ ಮನೆ ನಿರ್ಮಾಣ ಕಾರ್ಯವನ್ನು ಮುಂದುವರೆಸಲು ಬಿಟ್ಟರೆ ವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುವ ಸಂಭವ ಹೆಚ್ಚು ಇರುತ್ತದೆ. ಹಾಗಾಗಿ ಪ್ರತಿವಾದಿಗೆ ತಾನು ಕಟ್ಟುತ್ತಿರುವ ಕಟ್ಟಡ ನಿರ್ಮಾಣ ಕಾರ್ಯವನ್ನು ಸಂಪೂರ್ಣವಾಗಿ ನಿರ್ಬಂಧಿಸಲು ಬರುವುದಿಲ್ಲ. ಪ್ರತಿವಾದಿಯು ತಾನು ಸ್ವಾಧೀನಾನುಭವದಲ್ಲಿರುವ ಆಸ್ತಿ ಮತ್ತು ಕಟ್ಟಡ ಮಂಜೂರಾತಿಯಲ್ಲಿ ಅನುಮತಿ/ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ ತನಗೆ ಮಂಜೂರಾಗಿರುವ ಆಸ್ತಿಯಲ್ಲಿ ಮನೆಯನ್ನು ನಿರ್ಮಾಣ ಮಾಡಲು ಯಾವುದೇ ಅಭ್ಯಂತರ ಇರುವುದಿಲ್ಲ. ಆದರೆ ಪ್ರತಿವಾದಿ ಕಾನೂನುಬಾಹಿರವಾಗಿ ವಾದಿಯ ದಾವಾ ಆಸ್ತಿಯನ್ನು ಒತ್ತುವರಿ ಮಾಡುವಂತಿಲ್ಲ. ಆದಕಾರಣ ವಾದಿಯು ಪ್ರತಿವಾದಿಯು ಅಕ್ರಮವಾಗಿ ದಾವಾ ಆಸ್ತಿಯ ಪೂರ್ವ ಭಾಗದಲ್ಲಿ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಈ ಹಂತದಲ್ಲಿ ಸಾಬೀತು ಮಾಡಲು ಸಫಲರಾಗಿರುತ್ತಾರೆ. ಆದಕಾರಣ ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ - 2 ನ್ನು

ಪುರಸ್ಕರಿಸಲು ಅರ್ಹರಾಗಿರುತ್ತದೆ. ಮೇಲೆ ಹೇಳಿದಂತೆ ಪ್ರತಿವಾದಿಯು ತನಗೆ ಸೇರಿದ ನಿರ್ದಿಷ್ಟವಾದ ಸ್ವತ್ತಿನಲ್ಲಿ ಮಾತ್ರ ಕಟ್ಟಡ ಮಂಜೂರಾತಿ ಅನುಮತಿಯಂತೆ ಕಟ್ಟಡ ನಿರ್ಮಿಸಲು ಈ ಆದೇಶವು ಅಡ್ಡಿ ಬರುವುದಿಲ್ಲ. ಆದಕಾರಣ ನ್ಯಾಯಾಲಯವು ಮೇಲ್ಕಂಡ ಮೂರುಾ ಅಂಶಗಳನ್ನು ಸಕರಾತ್ಮಕವಾಗಿ ಉತ್ತರಿಸುತ್ತದೆ.

**17. ಅಂಶಃ 4 :**

ಈ ಮೇಲ್ಕಂಡ ಅಂಶಗಳಲ್ಲಿನ ಕಾರಣಗಳಿಂದ ಈ ನ್ಯಾಯಾಲಯವು ಈ ಕೆಳಕಂಡಂತೆ ಅಂತಿಮ ಆದೇಶವನ್ನು ಮಾಡಿರುತ್ತದೆ.

ಃ ಆದೇಶ ಃ

ವಾದಿಯು ಪ್ರತಿವಾದಿಯ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ಪುರಸ್ಕರಿಸಿದೆ.

ಈ ಮೂಲಕ ವಾದಿಯ ದಾವಾ ಆಸ್ತಿಯನ್ನು ಅತಿಕ್ರಮಿಸಿ ಯಾವುದೇ ಕಟ್ಟಡ ನಿರ್ಮಾಣ ಮಾಡದಂತೆ ಮತ್ತು ದಾವಾ ಆಸ್ತಿಯ ಮೇಲೆ ವಾದಿಯ ಸ್ವಾಧೀನಾನುಭವಕ್ಕೆ ಯಾವುದೇ ಅಡ್ಡಿ -ಆತಂಕ ಉಂಟು ಮಾಡದಂತೆ ಪ್ರತಿವಾದಿಯನ್ನು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮುಖಾಂತರ ನಿರ್ಬಂಧಿಸಿ ಆದೇಶಿಸಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 9 ನೇ ಡಿಸೆಂಬರ್ 2022 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

ಪ್ರತಿಯ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.

ಆದೇಶ

ವಾದಿಯು ಪ್ರತಿವಾದಿಯ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ಪುರಸ್ಕರಿಸಿದೆ.

ಈ ಮೂಲಕ ವಾದಿಯ ದಾವಾ ಆಸ್ತಿಯನ್ನು ಅತಿಕ್ರಮಿಸಿ ಯಾವುದೇ ಕಟ್ಟಡ ನಿರ್ಮಾಣ ಮಾಡದಂತೆ ಮತ್ತು ದಾವಾ ಆಸ್ತಿಯ ಮೇಲೆ ವಾದಿಯ ಸ್ವಾಧೀನಾನುಭವಕ್ಕೆ ಯಾವುದೇ ಅಡ್ಡಿ -ಆತಂಕ ಉಂಟು ಮಾಡದಂತೆ ಪ್ರತಿವಾದಿಯನ್ನು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮುಖಾಂತರ ನಿರ್ಬಂಧಿಸಿ ಆದೇಶಿಸಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

<u>ಪ್ರತ್ಯೇಕ ಪ್ರತಿಯ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.</u>

<u>ಆದೇಶ</u>

ವಾದಿಯರು ಪ್ರತಿವಾದಿಯರ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ-3 ನ್ನು ವಜಾ ಮಾಡಲಾಗಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.